ಕಾಮೇಶ್ವರ ಚಲಾಯಿಸಿದ. ಮಾಸ್ತರು ನಡೆಸುತ್ತಿದ್ದ ಆಡಳಿತದ ಉಸ್ತುವಾರಿಗೆ ಕಾಮೇಶ್ವರ ಪದೇ ಪದೇ ಬರುತ್ತಿದ್ದ. ದತ್ತು ಹೈಸ್ಕೂಲಿಗೆ ಹೋಗದೆ, 'ತಲೆ ನೋಯ್ತು', 'ಗಂಟಲು ಉರಿ' ಎಂದು ಮನೆಯಲ್ಲಿ ಮಲಗಿಬಿಡುತ್ತಿದ್ದ. ಸಲೀಲತ್ತೆ ಅವನನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿಯನ್ನು ಕಾಮೇಶ್ವರನಿಗೆ ವಹಿಸಿದಳು. ಕಾಮೇಶ್ವರ ಕೊನೆಯ ಅಸ್ತ್ರವಾಗಿ ಶಳಕೆಯಲ್ಲಿ ಬಾರಿಸಿದ್ದ. ದತ್ತು ಎಷ್ಟು ಹೊಡೆದರೂ ಅಳುತ್ತಿರಲಿಲ್ಲ; ಹಟ ಬಿಡುತ್ತಿರಲಿಲ್ಲ; ಶಾಲೆ ತಪ್ಪಿಸಲು ಇರುವ ಕಾರಣವನ್ನೂ ಹೇಳುತ್ತಿರಲಿಲ್ಲ. "ಶಾಲೆ ಬಿಟ್ರೆ ಮಂತ್ರದ ಪಾಠಶಾಲೆಗೆ ಹಾಕ್ವಾ" ಎಂಬ ತೀರ್ಮಾನಕ್ಕೆ ಕಾಮೇಶ್ವರ ಬಂದಿದ್ದ. "ಕಡ್ಡ ಅಂವ, ಸಮಾ ಜಪ್ಪು" ಎಂಬ ಅನುಮತಿ ಪಡೆದವನಂತೆ ಕಾಮೇಶ್ವರ ತಿಥಿಯೂಟದ ನಂತರ ಬಾವಯ್ಯ ಭಟ್ಟರು ಸಣ್ಣ ನಿದ್ದೆ ಮುಗಿಸಿ ಚಾ ಕುಡಿದು ಅಕ್ಕಿಗಂಟು ಕಟ್ಟುತ್ತಿದ್ದಾಗ ದತ್ತು ಕರೆದು ಅವರೆದುರು ನಿಲ್ಲಿಸಿ, "ನಿನ್ನ ಗೋತ್ರ ಪ್ರವರ ಹೇಳೋ" ಆಜ್ಞಾಪಿಸಿದ; ದತ್ತು ತುಟಿ ಬಿಚ್ಚಲಿಲ್ಲ; "ಗಾಯತ್ರಿ ಮಂತ್ರ ಹೇಳೋ" ಕಾದ. ನಿರುತ್ತರ. "ಭಟ್ರ ಕಾಲ್ಮುಟ್ಟಿ ನಮಸ್ಕಾರ ಮಾಡು" ದತ್ತು ಹಂದಾಡಲಿಲ್ಲ; ಇತ್ತ ದತ್ತು ಸೆಟೆದು ಒರಟಾಗುತ್ತಿದ್ದಂತೆ ಅತ್ತ ಕಾಮೇಶ್ವರ ತಿಥಿಯೂಟಕ್ಕೆ ಸೇರಿದ ಕೇರಿಯ ಜನ, ನೆಂಟರ ಎದುರಲ್ಲಿ ಮಾತು ಕೇಳದ ಚೋಟುದ್ದ ಪೋರ ತನ್ನ ಅವಮಾನಿಸುತ್ತಿದ್ದಾನೆಂದು ರೇಗುತ್ತ ಹೋದ; ಅವನ ಮಾತು ಕಂಪಿಸಿ, ಕೈ ನಡುಗುತ್ತಿತ್ತು. ಕಾಮೇಶ್ವರ ಅದೇ ನಡಗುತ್ತಿದ್ದ ಕೈಯಿಂದ ಬಲಿಪಶುವಿನಂತೆ ಚಕ್ಕಲಪಟ್ಟಿ ಹಾಕಿ ತಲೆ ತಗ್ಗಿಸಿ ಕೂತಿದ್ದ ದತ್ತುವಿನ ಚಡ್ಡಿ ತೊಡೆಗೆ ಬಾರಿಸಿದ; ಪಟೋಲ ಸದ್ದಿನೊಂದಿಗೆ ಬಾಸುಂಡೆ ಎದ್ದವು; ಕನ್ನೆತ್ತರ ಜಾಗದಲ್ಲೆ ಮತ್ತೆಮತ್ತೆ ಹೊಡೆದ; ಎಲ್ಲಮ್ಮನ ಗುದುಮುರಿಗೆಯವನು ಚಾಟಿ ಬೀಸಿದ ಛಳೀರ ಸಪ್ಪಳ ಬಂತು; ಯಾರೂ ತಪ್ಪಿಸಲು ಯತ್ನಿಸಲಿಲ್ಲ; ದತ್ತು ನೋವಾದರೂ ಚೀರಲಿಲ್ಲ; ಕಣ್ಣೀರು ತೊಟ್ಟಿಕ್ಕಲಿಲ್ಲ; ಅವನ ಪ್ರಹಾರಕ್ಕೆ ಪ್ರತಿರೋಧ ತಂತ್ರ ಎಂಬಂತೆ ಬಸವನ ಹುಳದಂತೆ ಮುದ್ದೆಯಾಗಿ ಉರುಳಿದ; ಅತ್ಯಂತ ಭೀಕರ ಮೌನ ಏಕಪಕ್ಷೀಯವಾಗಿ ಕಾಮೇಶ್ವರನನ್ನು ಬೆಂಬಲಿಸಿದಂತಿತ್ತು; ಶಿರಸಾಷ್ಟಾಂಗಕ್ಕೆ ಚಾಚಿದ ನರಬಳ್ಳಿಗಳ ಸೊಟ್ಟಾದ ಪಾದಗಳನ್ನು ಭಟ್ಟರು ಹಿಂತೆಗೆದರು; "ಅವಂಗೆ ಹೊಡೀದಕ್ಕೆ ಅಧಿಕಾರ ಯಾರು ಕೊಟ್ಟಿದ್ದು?" ಅಕ್ಕು ಪ್ರತಿಭಟಿಸಿದ್ದಳು. ಅಪ್ಪಿಯಕ್ಕನ ಮೇಲೆ ಪ್ರಹಾರವಾಗದೆ ಉಳಿದ ರೋಷ, ಗಣಪತಿಯ ದ್ರೋಹದ ಕುದಿಯ ಉರಿ ತಾಳಲಾರದೆ ನಿಷ್ಪಾಪಿ ದತ್ತುವನ್ನು ಹತಾಶ ಕಾಮೇಶ್ವರ ಮನಸಾರೆ ದಂಡಿಸಿದ ಎಂದು ಅನಂತನಿಗೆ ಆಮೇಲೆ ಹೊಳೆಯಿತು; ತಂದೆಯಿಲ್ಲದ ಮಗನನ್ನು ಮನೆತನದ ಮರ್ಯಾದೆಯ ನೊಗಕ್ಕೆ ಸರಿಯಾಗಿ ಮಣಿಸುತ್ತಿದ್ದಾನೆಂದು ಸಲೀಲತ್ತೆ ಮೂಕ ಪ್ರೇಕ್ಷಕಿಯಾಗಿದ್ದಿರಬಹುದೆಂದು; ಇಂಥ ಮನುಷ್ಯ ದ್ವೇಷಿ, ಕ್ರೂರಿಯೊಡನೆ ಸಂಸಾರ ನಿರಾಕರಿಸಿದ ತನ್ನ ತೀರ್ಮಾನ ಸೂಕ್ತವೆಂದು ಸ್ವತಃ ಗಂಡನೇ ಪ್ರತ್ಯಕ್ಷ ಪ್ರಮಾಣ ನೀಡುತ್ತಿದ್ದಾನೆಂದು ಅಪ್ಪಿ ತೆಪ್ಪಗಿದ್ದರಬಹುದು; ಪಾಚಣ್ಣನಂತು ಟೊಪ್ಪಿ ತೆಗೆದು ತಲೆಬೋಳಲ್ಲಿ ಚಿಗುರಿದ ಕೂದಲ ಬುಡವನ್ನು ಚರಚರನೆ ತುರಿಸಿಕೊಳ್ಳುತ್ತ ಕಾಮೇಶ್ವರನಿಗಿಂತಲೂ ವಯಸ್ಸಿನಲ್ಲಿ ಹಿರಿಯನಾದರೂ ತಂಗಿಯನ್ನು ಮದುವೆಯಾದದ್ದಕ್ಕೆ ಕಿರಿಷಡ್ಡಕನಾಗಿ ಮಾವನ ಮನೆಯ ಅಧಿಕಾರ ವಂಚಿತನಾದ ಅತೃಪ್ತಿಯಲ್ಲಿ ತಳಮಳಿಸುತ್ತ ಜ್ಯೇಷ್ಠ ಅಳಿಯನ ಭಯ ಹುಟ್ಟಿಸಿ, ಹಿಡಿತ ಬಿಗಿಗೊಳಿಸುವ ನಿರ್ದಯ ಅಟ್ಟಹಾಸದ ತಂತ್ರ ಲೋಕಕ್ಕೆ ತಿಳಿಯಲಿ ಎಂದು ಪ್ರಸಂಗದ ರಸೋದ್ರೇಕವನ್ನು ಆನಂದಿಸುತ್ತಿದ್ದ.

ಕೆಲ ದಿನಗಳ ತರುವಾಯ ಅನಂತ ಅಂತರಂಗದಲ್ಲಿ ಕೇಳಿದ, "ತಾಯಾಣೆಗೂ ಯಾರಿಗೂ ಹೇಳ್ತಿಲ್ಲೆ ಹೇಳು" ಎಂದು ಬಲಗೈ ಭಾಷೆ ತೆಗೆದುಕೊಂಡು ದತ್ತು ಕೊಟ್ಟಿಗೆ ಹಿಂದೆ ನಿಂತು ಹೇಳಿದ್ದ. ಸಾರಾಂಶವಿಷ್ಟು: ಶಾಲೆಯಲ್ಲಿ ಕಸ ಹೆಕ್ಕುವಾಗ, ಆಟವಾಡುವಾಗ, ಕ್ಲಾಸಿಗೆ ಶಿಕ್ಷಕರು ಬಾರದ ಸಮಯ, 'ಏ ರಾಯ್ಕರ ಗಣಪತಿ ಭಾವ' ಎಂದು ಸಹಪಾಠಿಗಳು ಹಂಗಿಸುತ್ತಾರಂತೆ; ಮಾಸ್ತರಿಗೆ ದೂರು ಕೊಟ್ಟಾಗ ಅವರು, 'ದತ್ತೂಗೆ ಇಬ್ರು ಭಾವಂದಿರು! ಗೊತ್ತಿಲ್ಲ ಮಕ್ಕಳೆ' ಎಂದು ಎಲ್ಲರೊಟ್ಟಿಗೆ